# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

**ಅನುಸೂಚಿ-7**

**(ಉಪವಿಧಿ ಸಂಖ್ಯೆ: 5.3)**

## ಪ್ರಾರಂಭಿಕ ಪ್ರಮಾಣ ಪತ್ರ

No. BDA/EM/EO-2/TA-3/CC/T-39 /2017-18, Dated: 21.04.2017

**ಇವರಿಗೆ,**

M/s Unicon Shelters Pvt Ltd,
SLN PLAZA, No. 953,
2nd Floor, 21st Main Road,
15th Cross, Banashankari 2nd Stage,
Bangalore-560 070.

**ವಿಷಯ:-** ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ವೀರಸಾಗರ ಗ್ರಾಮದ ಸರ್ವೆ ನಂ. 4/4 ರಲ್ಲಿ ನಿರ್ಮಿಸುತ್ತಿರುವ ಟವರ್-ಎ, ಬಿ, ಸಿ ಮತ್ತು ಡಿ ಗಳಲ್ಲಿ ಒಟ್ಟು 264 ವಸತಿ ಘಟಕಗಳನ್ನೊಳಗೊಂಡ ಬಹುವಸತಿ ಕಟ್ಟಡ ಮತ್ತು ಕ್ಲಬ್ ಹೌಸ್ ಕಟ್ಟಡ ನಿರ್ಮಾಣ ಕಾಮಗಾರಿಯ ತಳ ಅಂತಸ್ಥಿನ ಕಾಮಗಾರಿ ಪೂರ್ಣಗೊಂಡಿದ್ದು, ನೆಲ ಅಂತಸ್ಥಿನ ಕಾಮಗಾರಿ ಪ್ರಾರಂಭಿಸುವ ಸಲುವಾಗಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಿಕೆ ಬಗ್ಗೆ.

**ಉಲ್ಲೇಖ:-** 1. ನಕ್ಷೆ ಮಂಜೂರಾತಿ ಸಂಖ್ಯೆ: ಬೆಂ.ಅ.ಪ್ರಾ/ನಮ/ಅಸ/ಅಅ-2/ತಾಸ-3/ಉ/33/2015-16 ದಿನಾಂಕ: 20.02.2016.
2. ನಿಮ್ಮ ಅರ್ಜಿಯ ದಿನಾಂಕ: 08.11.2016.
3. ಮಾನ್ಯ ಆಯುಕ್ತರ ಆದೇಶ ಸಂಖ್ಯೆ: 5497 ದಿನಾಂಕ: 18.03.2017.

******

housiey.com

ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ವೀರಸಾಗರ ಗ್ರಾಮದ ಸರ್ವೆ ನಂ. 4/4 ರಲ್ಲಿ ನಿರ್ಮಿಸುತ್ತಿರುವ ಟವರ್-ಎ, ಬಿ, ಸಿ ಮತ್ತು ಡಿ ಗಳಲ್ಲಿ ಒಟ್ಟು 264 ವಸತಿ ಘಟಕಗಳನ್ನು ಹೊಂದಿರುವ ತಳಮಹಡಿ+ನೆಲಮಹಡಿ+ 14ಮೇಲಂತಸ್ತು+ಟೆರೇಸ್‌ಗಳುಳ್ಳ ಬಹುವಸತಿ ಕಟ್ಟಡ, ಮತ್ತು ನೆಲಮಹಡಿ ಒಳಗೊಂಡ ಕ್ಲಬ್ ಹೌಸ್ ಕಟ್ಟಡ ಕಟ್ಟಲು ನಕ್ಷೆಯನ್ನು ಬೆಂ.ಅ.ಪ್ರಾ/ನಮ/ಅಸ/ಅಅ-2/ತಾಸ-3/ಉ/33/2015-16 ದಿನಾಂಕ: 20.02.2016 ರಲ್ಲಿ ಮಂಜೂರಾತಿ ಪಡೆದಿರುತ್ತೀರಿ. ಉಲ್ಲೇಖಿತ ಪತ್ರ (2) ರಲ್ಲಿ ತಾವು ಅರ್ಜಿ ಸಲ್ಲಿಸಿ ಸದರಿ ಯೋಜನೆಯಲ್ಲಿ ನಿರ್ಮಿಸುತ್ತಿರುವ ಒಟ್ಟು 264 ವಸತಿ ಕಟ್ಟಡಕ್ಕೆ ಮತ್ತು ಕ್ಲಬ್ ಹೌಸ್ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿದ್ದು ಯೋಜನೆಯ ಸ್ಥಳವನ್ನು **ಕಾರ್ಯಪಾಲಕ ಅಭಿಯಂತರರು (ಉ)** ರವರು **ದಿನಾಂಕ: 12.01.2017** ರಂದು ಪರಿವೀಕ್ಷಣೆ ನಡೆಸಿ ಗುರುತು ಮಾಡಿ ನಿರ್ಮಿಸುತ್ತಿರುವ ಅಡಿಪಾಯವನ್ನು ಹಾಗೂ ನಡುಜಾಗಗಳನ್ನು ನಿರ್ಮಾಣದಾರರು ಅನುಮೋದನೆಗಾಗಿ ಸಲ್ಲಿಸಿರುವ ನಕ್ಷೆಯನ್ನು ಹೋಲಿಸಿ ಪರೀಕ್ಷಿಸಲಾಗಿ ಅದು ನಕ್ಷೆಯಂತೆ ಇದ್ದದ್ದು ಕಂಡು ಬಂದಿದ್ದರಿಂದ ಹಾಗೂ ಕಾಲಂಗಳು ಮತ್ತು ನಡುಜಾಗಗಳು ಅನುಮೋದಿಸಿದಂತೆ ಇರುತ್ತದೆ ಎಂದು ನೀಡಿದ ವರದಿಯಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾನ್ಯ ಆಯುಕ್ತರ ಆದೇಶ ಸಂಖ್ಯೆ 5497 ದಿನಾಂಕ: 18.03.2017 ರಂದು ಕಾಮಗಾರಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಅನುಮೋದನೆ ನೀಡಿರುತ್ತಾರೆ. ಅದರನ್ವಯ ತಳ ಅಂತಸ್ಥಿನ ಕಾಮಗಾರಿ ಪೂರ್ಣಗೊಂಡಿರುವುದರಿಂದ ನೆಲ ಅಂತಸ್ಥಿನ ಕಾಮಗಾರಿ ಪ್ರಾರಂಭಿಸುವ ಸಲುವಾಗಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಗಿನ ಷರತ್ತುಗಳಿಗೊಳಪಟ್ಟು ಕಾಮಗಾರಿಯನ್ನು ಮುಂದುವರೆಸಲು ಈ ಮೂಲಕ ಅನುಮತಿ ನೀಡಲಾಗಿದೆ.

**ಪಾಲಿಸಬೇಕಾದ ಷರತ್ತುಗಳು**

1. ಪ್ರಶ್ನಿತ ಪ್ರದೇಶದಲ್ಲಿ ಕಟ್ಟಡ ಕಾಮಗಾರಿಯು ಮುಗಿಯುವವರೆವಿಗೂ ತಾತ್ಕಾಲಿಕ ಶೌಚಾಲಯವನ್ನು ಕಡ್ಡಾಯವಾಗಿ ನಿರ್ವಹಿಸಿ ಶುಚಿತ್ವವನ್ನು ಕಾಪಾಡುವುದು.
2. ಯೋಜನೆಯಲ್ಲಿ ಮಳೆ ನೀರು ಕೊಯ್ಲುಗಾಗಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿಕೊಂಡು ಗೃಹ ಹಾಗೂ ಇನ್ನಿತರೆ ಉಪಯೋಗಗಳಿಗಾಗಿ ಬಳಸಲು ಅವಕಾಶ ಕಲ್ಪಿಸಿಕೊಳ್ಳತಕ್ಕದ್ದು.
3. ಕುಡಿಯುವ ನೀರು ಹಾಗೂ ಬಳಸುವ ನೀರಿಗಾಗಿ ಪ್ರತ್ಯೇಕ ಪೈಪ್ ಲೈನುಗಳನ್ನು (Dual Piping System) ಅಳವಡಿಸುವುದು
4. ಕಟ್ಟಡ ನಿರ್ಮಾಣ ವೆಚ್ಚವು ಪ್ರತೀ ಚದರ ಅಡಿಗೆ 650/- ಕ್ಕಿಂತ ಹೆಚ್ಚಾದಲ್ಲಿ ಕಾರ್ಮಿಕ ಕಲ್ಯಾಣ ನಿಧಿಗೆ ಅಂದಾಜು ಮೊತ್ತದ ಶೇ 01 % ರಷ್ಟು ಮೊತ್ತವನ್ನು ಪ್ರಾಧಿಕಾರಕ್ಕೆ ಭರಿಸತಕ್ಕದ್ದು.

5. ಅರ್ಜಿದಾರರು ಕಟ್ಟಡ ನಕ್ಷೆ ಮಂಜೂರಾತಿ ಸಮಯದಲ್ಲಿ ಬಾಕಿ ಇರುವ ಯಾವುದೇ ಅಭಿವೃದ್ಧಿ ಶುಲ್ಕ ಅಥವಾ ಇನ್ನಾವುದೇ ಶುಲ್ಕಗಳನ್ನು ಬಿಬಿಎಂಪಿ/ಬಿಡಿಎ ಸಂಸ್ಥೆಗಳಿಗೆ ಕಟ್ಟಡ ಪ್ರಾರಂಭಿಸುವ ಮೊದಲು ಸಂದಾಯ ಮಾಡತಕ್ಕದ್ದು.

6. ಕಟ್ಟಡದ ಗುಣಮಟ್ಟ, ಸುರಕ್ಷತೆ ಹಾಗೂ ವಿನ್ಯಾಸಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯಿಂದ ಜವಾಬ್ದಾರರಾಗಿರುವುದಿಲ್ಲ. ಈ ಅಂಶಗಳ ಪೂರ್ಣ ಜವಾಬ್ದಾರಿಯು ಅಭಿವೃದ್ಧಿದಾರರದ್ದೇ ಆಗಿರುತ್ತದೆ.

7. ಅಭಿವೃದ್ಧಿದಾರರು ಒಳಚರಂಡಿ ವ್ಯವಸ್ಥೆ ಕಾಮಗಾರಿಯನ್ನು ಸಂಬಂಧಪಟ್ಟ ಇಲಾಖೆಗೆ (BWSSB & DB) ನಿಗಧಿಪಡಿಸಿದ ಹಣವನ್ನು ಸಂಧಾಯ ಮಾಡಿ ಇಲಾಖೆಯವರ ಮಾರ್ಗದರ್ಶನದಲ್ಲಿ ನಿರ್ವಹಿಸುವುದು.

8. ಅರ್ಜಿದಾರರು Occupancy Certificate ಅನ್ನು ಪಡೆಯಲು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುವ ಸಮಯದಲ್ಲಿ ನೀರು ಸರಬರಾಜು ಕಾಮಗಾರಿಗಳು Sewage Treatment Plant ಹಾಗೂ Rain Water Harvesting ಅನ್ನು ನಿಯಮಕ್ಕನುಗುಣವಾಗಿ ನಿರ್ವಹಿಸಿರುವ ಬಗ್ಗೆ BWSSB ಯಿಂದ ದೃಢೀಕರಣ ಪತ್ರವನ್ನು ಸಲ್ಲಿಸುವುದು. ಹಾಗೆಯೇ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದಲೂ ಸಹ ಯೋಜನೆಯ ಸಮರ್ಪಕ ಅನುಷ್ಠಾನದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸುವುದು.

9. ಅರ್ಜಿದಾರರು ಪ್ರಾಧಿಕಾರವು ಕಾಲ ಕಾಲಕ್ಕೆ ವಿಧಿಸುವ ಎಲ್ಲಾ ನಿಬಂಧನೆಗಳಿಗೆ ಭದ್ದರಾಗಿರತಕ್ಕದ್ದು.

10. ಅರ್ಜಿದಾರರು ನಕ್ಷೆ ಮಂಜೂರಾತಿಗಾಗಿ ಯಾವುದೇ ತಪ್ಪು ದಾಖಲೆಗಳನ್ನೇನಾದರು ಸಲ್ಲಿಸಿರುವುದು ಕಂಡುಬಂದಲ್ಲಿ, ಮಂಜೂರಾದ ನಕ್ಷೆಯು ತನ್ನಿಂತಾನೆ ರದ್ದಾಗುವುದು ಹಾಗೂ ಕಾನೂನು ರೀತ್ಯಾ ಸೂಕ್ತ ಕ್ರಮ ಜರುಗಿಸಲಾಗುವುದು.

11. ಕಾರ್ಮಿಕ ಇಲಾಖೆಯ ಪತ್ರ ದಿನಾಂಕ: 04.03.2006 ರಲ್ಲಿನ ಷರತ್ತುಗಳನ್ನು ಪಾಲಿಸುವುದು.

12. ಪ್ರಾಧಿಕಾರವು ವಿಧಿಸುವ ಇತರೆ ಷರತ್ತುಗಳಿಗೆ ಬದ್ದರಾಗಿರ ತಕ್ಕದ್ದು.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಮಂಜೂರಾತಿ ನೀಡಿದವರ ಸಹಿ ಮತ್ತು
ಹುದ್ದೆ ನಾಮ
21/04/17

ಯಥಾ ಪ್ರತಿಯನ್ನು: ಕಾರ್ಯಪಾಲಕ ಅಭಿಯಂತರರು (ಉ) ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

Housiey.com